

# ಅಂದದ ಅಂಗಳಕ್ಕೆ ಅಪರಿಮಿತ ಪರಿಮಳ- ಅಗಣಿತ ಗುಣಗಳ ಸುರುಳಿ ಹೂವು

- ಡಾ. ಸತ್ಯ

ಆಳೆತ್ತರದ ಗಾತ್ರದ ಅಬ್ಬರದ ಹಸಿರುಗಿಡ ಸುರುಳಿ. ಅರಶಿನದ ಎಲೆಯಂತೆ ಇರುವ ಪರ್ಯಾಯ ಜೋಡಣೆಯ ಅಡಿ ಗಾತ್ರದ ಹಸಿರೆಲೆಯ ಸುಂದರ ಪೊದರು ಸಸ್ಯವಿದು. ಹುಸಿಕಾಂಡ.  ಗಿಡದ ತುದಿಯ ಹೂಗೊಂಚಲಿನಲ್ಲಿ ಬಿರಿಯುವ  ಮೂರು ನಾಕು ಸುಂದರ ಬಿಳಿಯ ಹೂಗಳು. ಕೆಲವೊಮ್ಮೆ ಹೂ ಅಂಚಿನಲ್ಲಿ ಬಂಗಾರದ ಬಣ್ಣದ ಹಳದಿ ರೇಕುಗಳು. ಉದ್ದನೆ ಸುರುಳಿ ಆಕಾರದ ಹೂ ಮೊಗ್ಗೆ ಬಿರಿದ ಮೇಲೆ ನಿಮ್ಮ ಮನೆಯಂಗಳಕ್ಕೆ ಸುರುಳಿಯ ಸುಗಂಧದ ಸಿಂಚನ. ಅದು ಅಂಗೈ ಅಗಲ ಹರಡಿಕೊಳ್ಳುವ  ಅಂದಗಾತಿ ಹೂ. ಹುಸಿ ಕಾಯಿ ಕಾಣಿಸಿದರೂ ಅದರಿಂದ ಹೊಸ ಗಿಡ ಪಡೆಯಲಾಗದು.ಬಲಿತ ಗಿಡದ ನೆಲದಡಿಯ ಗೆಡ್ಡೆಯಿಂದ, ಗಿಣ್ಣಿರುವ ಭಾಗದಿಂದ ಹೊಸ ಗಿಡ ಪಡೆಯಬಹುದು. ಅದನ್ನು ಹಸನು ಮಣ್ಣು, ಮರಳು ತುಂಬಿದ ಕುಂಡ ಅಥವಾ ಮಣ್ಣಿನಲ್ಲಿ ಹುಗಿದರಾಯಿತು.ಸುರುಳಿಯ  ಹೊಸ ಸಸಿ ಸುರಳೀತವಾಗಿ ಚಿಗುರೀತು. ಬಹುತೇಕ ಇಡೀ ವರ್ಷ ಹೂ ಬಿಡುವ ಸುರುಳಿ ಗಿಡಕ್ಕೆ ಹೆಚ್ಚಿನ ನೀರಾಸರೆ ಅತ್ಯಗತ್ಯ.

ಅಷ್ಟಗಂಧ ಎಂಬ ಹೆಸರಿನಡಿ ದೇಗುಲಗಳಲ್ಲಿ ದೇವತಾಕಾರ್ಯಗಳಲ್ಲಿ ಬಳಕೆಯಾಗುವ ಎಂಟು ಸುಗಂಧ ದ್ರವ್ಯಗಳ ಪೈಕಿ ಸುರುಳಿ ಹೂ ಮತ್ತು ಗೆಡ್ಡೆ ಕೂಡ ಸೇರಿದೆ. ಹವಾಯಿ ದ್ವೀಪದಲ್ಲಿ ಹೂಗಳಿಂದ ಸುಗಂಧ ತೈಲ ತೆಗೆಯುವರು. ಭಾರತದಲ್ಲಿ ಈ ಉದ್ದಿಮೆ ಇನ್ನೂ ಪ್ರಚಾರದಲ್ಲಿಲ್ಲ. ಹುಸಿ ಕಾಂಡದ ಬಳಕೆಯಿಂದ ಪೇಪರ್, ರಟ್ಟು ಪಲ್ಪ್ ತಯಾರಿಸಬಹುದು. ನೆಲದಡಿಯ ಗೆಡ್ಡೆಯಿಂದ ಅರಾರೂಟ್ ಮಾದರಿಯ ಹಿಟ್ಟು ತಯಾರಿಸುವರು. ಜ್ವರದಲ್ಲಿ ಅದು ಪಥ್ಯ. ಟಾನಿಕ್‌ನಂತೆ ಅದು ಶಕ್ತಿ  ವರ್ಧಕ. ಕೀಲುಗಂಟಿನ ನೋವು ನಿವಾರಕ. ಅಂದದ ಹೂ ಮಾಲೆ ಮಾನಿನಿಯರ ಮುಡಿಗೇರಲು ಅರ್ಹ. ಜಿಂಜಿಬರೇಸೀ ಕುಲದ ಸುರುಳಿಯ ಲ್ಯಾಟಿನ್ ಹೆಸರು ಹೆಡಿಖಿಯಂ ಕೊರೊನೇರಿಯ. ಹಳದಿ ಹೂವಿನ ಜಾತಿ ಹೆ. ಫ್ಲೆವೆಸೆನ್ಸ. ಇವೆರಡರ ಅಂದ ಚಂದಕ್ಕೆ ಪರಿಮಳಕ್ಕೆ ಹೋಲಿಕೆ ಇಲ್ಲ. ಕಾಮನ್ ಜಿಂಜರ್ ಲಿಲ್ಲಿ, ಗಾರ್ಲಂಡ್ ಫ್ಲವರ್ ಎಂಬ ಅಂಗ್ಲ ಹೆಸರಿದೆ.